# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಡಿ ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 771 |
| ಉತ್ತರಿಸಬೇಕಾದ ದಿನಾಂಕ | : | 22.02.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಳಿ, ಕುರಿ, ಮೇಕೆ ಸಾಕಾಣಿಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಲಾಭ ತರುವುದರಿಂದ ನಿರುದ್ಯೋಗ ಯುವಕರಿಗೆ ಸರ್ಕಾರದಿಂದ ದೊರಕುವ ತರಬೇತಿ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳು ಹಾಗೂ ಹಣಕಾಸಿನ ಸಂಸ್ಥೆಗಳಾದ ಬ್ಯಾಂಕ್ ನಬಾರ್ಡ್‌ಗಳ ಮೂಲಕ ದೊರಕುವ ಹಣಕಾಸಿನ ನೆರವುಗಳೇನು; (ವಿವರ ಒದಗಿಸುವುದು) | ರಾಜ್ಯದಲ್ಲಿ 10 ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ನಿಯಮಿತವಾಗಿ ರೈತರಿಗೆ 2 ದಿನಗಳ ಕೋಳಿ, ಸಾಕಾಣಿಕೆ, ಕುರಿ/ಮೇಕೆ ಸಾಕಾಣಿಕೆ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕುರಿ/ಮೇಕೆ ಸಾಕಾಣಿಕೆ ಕುರಿತು ನಿರುದ್ಯೋಗಿ ಯುವಕ ಯುವತಿಯರಿಗೆ ರಾಜ್ಯಾದ್ಯಂತ ವೈಜ್ಞಾನಿಕವಾಗಿ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಜಿಲ್ಲೆಗೆ ಪ್ರತಿ ತರಬೇತಿಗೆ 40 ಅಭ್ಯರ್ಥಿಗಳಂತೆ 2 ತರಬೇತಿಗಳನ್ನು ಅಂದರೆ ಒಟ್ಟು 50 ತರಬೇತಿಗಳನ್ನು ರೂ.5 ಲಕ್ಷ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.<br><br>ರಾಜ್ಯ ಸರ್ಕಾರದ ವತಿಯಿಂದ SCP ಮತ್ತು TSP ಯೋಜನೆಗಳಡಿ 6+1 ಕುರಿ/ಮೇಕೆ ಘಟಕಗಳ ಸ್ಥಾಪನೆಗೆ ಘಟಕ ವೆಚ್ಚ ರೂ.45,000 ಗಳಲ್ಲಿ ಶೇ.90 ರಷ್ಟು ಸಹಾಯಧನ ಮತ್ತು ಶೇ.10 ರಷ್ಟು ಫಲಾನುಭವಿಯ ವಂತಿಕೆ/ಬ್ಯಾಂಕ್ ಸಾಲದೊಂದಿಗೆ ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ಒದಗಿಸಲಾಗಿದೆ.<br>ಕೇಂದ್ರ ಸರ್ಕಾರದ RKVY ಯೋಜನೆಯಡಿ 10+1 ಕುರಿ/ಮೇಕೆ ಘಟಕಗಳ ಸ್ಥಾಪನೆಗಾಗಿ ರೂ.70,000 ಘಟಕದ ವೆಚ್ಚದಲ್ಲಿ ಶೇ.50 ರಷ್ಟು ಸಹಾಯಧನ ಮತ್ತು ಶೇ.50 ರಷ್ಟು ಫಲಾನುಭವಿ ವಂತಿಕೆ/ಬ್ಯಾಂಕ್ ಸಾಲದೊಂದಿಗೆ ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ಒದಗಿಸಲಾಗಿದೆ.<br><br>2022-23ನೇ ಸಾಲಿನಲ್ಲಿ ಹೊಸದಾಗಿ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ 20+1 ಕುರಿ/ಮೇಕೆ ಘಟಕ ಸ್ಥಾಪನೆಗಾಗಿ ಘಟಕದ ವೆಚ್ಚ ರೂ.1,75,000 ಗಳಲ್ಲಿ ಶೇ.25 ರಷ್ಟು ಸಹಾಯಧನ, ಶೇ.25 ರಷ್ಟು ಫಲಾನುಭವಿಗಳ ವಂತಿಕೆ ಹಾಗೂ ಶೇ.50 ರಷ್ಟು ಬ್ಯಾಂಕ್ ಸಾಲದೊಂದಿಗೆ ಯೋಜನೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | 2021-22 ರಿಂದ 2025-26 ರ ಅವಧಿಯಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಗ್ರಾಮೀಣ ಕೋಳಿ, ಕುರಿ ಮತ್ತು ಮೇಕೆ, ಹಂದಿ, ಸಾಕಾಣಿಕೆ ಘಟಕಗಳ ಉದ್ಯಮಶೀಲತೆ ಅಭಿವೃದ್ಧಿಯನ್ನು ಬೆಂಬಲಿಸುವುದು ಮತ್ತು ತಳಿಗಳ ಸುಧಾರಣೆಯ ಉದ್ದೇಶವನ್ನು ಹೊಂದಲಾಗಿದೆ.<br><br>1. ಗ್ರಾಮೀಣ ಕೋಳಿ ಉದ್ಯಮಶೀಲತೆ ಮಾದರಿ ಲೋ ಇನ್ಪುಟ್ ಟೆಕ್ನಾಲಜಿಯ 1000+100 ಮಾತೃಕೋಳಿ ಫಾರ್ಮ್ ಸ್ಥಾಪನೆ, ಮರಿಗಳ ಉತ್ಪಾದನೆಗಾಗಿ ಹ್ಯಾಚರಿ ಮತ್ತು ಮರಿಗಳ ಸಾಕಾಣಿಕೆಗಾಗಿ ಪೋಷಕ ಘಟಕಗಳ ಸ್ಥಾಪನೆ. ಯೋಜನಾ ವೆಚ್ಚ ಗರಿಷ್ಠ ರೂ 50.00 ಲಕ್ಷ, ಇದಕ್ಕಾಗಿ ಗರಿಷ್ಠ ರೂ.25.00 ಲಕ್ಷ ಸಹಾಯ ಧನವನ್ನು ಒದಗಿಸಲಾಗುವುದು.<br>2. ಮೇಕೆ /ಕುರಿ ಮರಿಗಳ ಉತ್ಪಾದನೆಗೆ ಕೆಳಕಂಡಂತೆ ಸಹಾಯ ಧನವನ್ನು ಒದಗಿಸಲಾಗುವುದು.<br>100+5 Breeding ಘಟಕ– ಯೋಜನಾ ವೆಚ್ಚ ರೂ.20.00 ಲಕ್ಷ, ಸಹಾಯಧನ ರೂ.10.00 ಲಕ್ಷ.<br>200+10 Breeding ಘಟಕ–ಯೋಜನಾ ವೆಚ್ಚ ರೂ.40.00 ಲಕ್ಷ, ಸಹಾಯಧನ ರೂ.20.00 ಲಕ್ಷ.<br>300+15 Breeding ಘಟಕ–ಯೋಜನಾ ವೆಚ್ಚ ರೂ.60.00 ಲಕ್ಷ, ಸಹಾಯ ಧನ ರೂ.30.00 ಲಕ್ಷ<br>400+20 Breeding ಘಟಕ–ಯೋಜನಾ ವೆಚ್ಚ ರೂ.80.00 ಲಕ್ಷ, ಸಹಾಯ ಧನ ರೂ.40.00 ಲಕ್ಷ<br>500+25 Breeding ಘಟಕ–ಯೋಜನಾ ವೆಚ್ಚ ರೂ.100.00 ಲಕ್ಷ, ಸಹಾಯ ಧನ ರೂ.50.00 ಲಕ್ಷ<br>3. ಹಂದಿ ಮರಿಗಳ ಉತ್ಪಾದನೆ ಮತ್ತು ಹಂದಿ ಮರಿಗಳ ಕೊಬ್ಬಿಸುವಿಕೆಗಾಗಿ ಕೆಳಕಂಡಂತೆ ಸಹಾಯ ಧನವನ್ನು ಒದಗಿಸಲಾಗುವುದು.<br>100+10 ಘಟಕ–ಯೋಜನಾ ವೆಚ್ಚ ರೂ.60.00 ಲಕ್ಷ ಸಹಾಯ ಧನ ರೂ.30.00 ಲಕ್ಷ.<br>50+5 ಘಟಕ–ಯೋಜನಾ ವೆಚ್ಚ ರೂ.30.00 ಲಕ್ಷ, ಸಹಾಯ ಧನ ರೂ.15.00 ಲಕ್ಷ |
| ಆ) | ಈ ವೃತ್ತಿಯನ್ನು ಪ್ರೋತ್ಸಾಹಿಸಲು ಹೊರ ದೇಶದ ತಳಿಗಳನ್ನು ಪರಿಚಯಿಸುವ ಮೂಲಕ ಹಾಗೂ ತಜ್ಞರ ಮೂಲಕ ಯುವಕರಿಗೆ ತರಬೇತಿ ನೀಡಲು ಇರುವ ಸರ್ಕಾರದ ಯೋಜನೆಗಳೇನು; (ವಿವರವಾದ ಮಾಹಿತಿಯನ್ನು ಒದಗಿಸುವುದು) | ಪ್ರಸ್ತುತ ಹೊರ ದೇಶದ ತಳಿಗಳನ್ನು ರಾಜ್ಯದಲ್ಲಿ ಪರಿಚಯಿಸುವ ಯಾವುದೇ ಯೋಜನೆ ಸರ್ಕಾರದ ಮುಂದಿರುವುದಿಲ್ಲ. ಏಕೆಂದರೆ, ತಳಿ ಸಂವರ್ಧನಾ ನೀತಿ (Breeding policy) ಜಾರಿಯಲ್ಲಿದ್ದು, ಇದರಲ್ಲಿ ಸ್ಥಳಿಯ ಕುರಿ/ಮೇಕೆ ತಳಿಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.<br><br>ಇಲಾಖೆ/ನಿಗಮಗಳ ವತಿಯಿಂದ ತಜ್ಞರ ಮೂಲಕ ನಿರುದ್ಯೋಗಿ ಯುವಕ ಯುವತಿಯರಿಗೆ ಕಾಲ ಕಾಲಕ್ಕೆ ವೈಜ್ಞಾನಿಕ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |

| | | |
|---|---|---|
| ಇ) | ಕೋಳಿ, ಕುರಿ, ಮೇಕೆ ಸಾಕಾಣಿಕೆ ಉತ್ಪನ್ನಗಳನ್ನು ಹೊರ ದೇಶಕ್ಕೆ ರಫ್ತು ಮಾಡಲು ಇರುವ ರೂಪರೇಷಗಳೇನು; ರಫ್ತು ಉತ್ಪಾದನೆ ಹೆಚ್ಚಿಸುವ ಸಲುವಾಗಿ ತರಬೇತಿ ಹಣಕಾಸು ಹಾಗೂ ಹಣಕಾಸು ನೆರವು ನೀಡಲು ಸರ್ಕಾರ ಕೈಗೊಂಡಿರುವ ಯೋಜನೆಗಳೇನು? (ವಿವರವಾದ ಮಾಹಿತಿಯನ್ನು ನೀಡುವುದು) | ರಾಜ್ಯದಿಂದ ಕೋಳಿ, ಕುರಿ, ಮೇಕೆ ಸಾಕಾಣಿಕೆ ಉತ್ಪನ್ನಗಳನ್ನು ಹೊರದೇಶಕ್ಕೆ ರಫ್ತು ಮಾಡುವ ಯಾವುದೇ ಯೋಜನೆಗಳು ಸರ್ಕಾರದ ಮುಂದಿರುವುದಿಲ್ಲ. |

ಇ–ಪಸಂಮೀ 62 ಸಲೆವಿ 2023

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು